ಮೈಸೂರ ಗಿಜಿಟ.

ನಂ. 7] ಸರ್ಕಾರದಿಂದ ಘಾಯಿಷ್ ಆದ್ದು. [1895.

ಬೆಂಗಳೂರು, ಗುರುವಾರ, ಫಿಬ್ರವರಿ ತಾ। 28, ಸ್ಯ 1895.

೨ನೇ ಭಾಗ.

ಇಂಡ್ಯಗವರ್ನಮೆಂಟ್, ರೆಸಿಡೆಂಟರು, ಜೇಫ್ ಜಡ್ಜೀರು ವಗ್ಯೆರೇರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ನೋಟಿಸ.

ತಾರೀಖು 29ನೇ ಆಗಸ್ಟ್ 1894.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಕೆಳಗೆ ನಮೂದಿಸಿರುವ 12 ಕಬ್ಬಿಣದ ಆಲೆಗಳು ಬೆಂಗಳೂರು ಕೋಟೆಯಲ್ಲಿ ಹಳೇಸುಲ್ತಾನ್ ಮಹಲಿನಲ್ಲಿರುವ ಫಾರೆಸ್ಟ್ ಇಲಾಖಾ ಇನ್ಸ್‌ಪೆಕ್ಟರ್ ಜನರಲ್ ಸಾಹೆಬರವರ ಆಫಿಸಿನಲ್ಲಿ ಖರೀದಿಗೆ ದೊರಿಯುತ್ತೆ.

ನಂಬರ್.	ತಯಾರ್ ಮಾಡಿದ ಕಾರ್ಖಾನೆ ಹೆಸರು.	ಅಸಲ್ ಖರೀದಿ (ರೂಪಾಯಿ.)
7	ಬೆಂಗಳೂರು ರಿಕ್ಕಿಯವರ ಕಾರ್ಖಾನೆ	ವಂದಕ್ಕೆ 150
2	ಇರ್ಗ್ಲಾಡ್ ಪೋರ್ಟರು ಬ್ರದರಸ್‌ರ ಡಿಟೋ	,, 170
1	ಮದ್ರಾಸ್ ಓಕ್ಸರವರ ಡಿಟೋ	,, 250
1	ಡಿಟೋ ಡಿಟೋ ಡಿಟೋ	,, 188
1	ಡಿಟೋ ಬೋರ್ಯಾಮರವರ ಡಿಟೋ	,, 85

ಖರೀದೀದಾರ್ರು ವ್ಯವಸಾಯ ಮಾಡುವವೆರಾಗಿದ್ದಲ್ಲಿ, ಅಸಲ್ ಖರೀದಿಯಲ್ಲಿ ಕೇಕಡಾ $12\frac{1}{2}$ ರೂಪಾಯಿ ಸೋಡಿಯಿಂದ ವಿಕ್ಯಯಿ ಸಲ್ಪಡುವದು.